# ನಾಮ್ಚಿಯಿಂದ ಡಾರ್ಜಿಲಿಂಗ್..



**ಸಿಕ್ಕಿಂನ ಸುಂದರ ಪ್ರಕೃತಿಯ ಮಡಿಲಲ್ಲಿ ಚಹಾ ತೋಟಗಳನ್ನು ಹಾದು, ಪಶ್ಚಿಮ ಬಂಗಾಳದ ದುರ್ಗಮ ದಾರಿಗಳನ್ನು ಕ್ರಮಿಸಿದ ಈ ಪ್ರಯಾಣ ನಿಜಕ್ಕೂ ಚೇತೋಹಾರಿ ಅನುಭವ.**

ಚಿತ್ರ– ಲೇಖನ: **ಸಂಪತ್ ಕುಮಾರ್ ಜೈನ್**



ಸಮ್‌ದ್ರುಪ್ತಸೆ ಬುದ್ಧ ದೇವಾಲಯ



ರಾಕ್ ಗಾರ್ಡನ್ ದಾರ್ಜಿಲಿಂಗ್



ನಾಮ್‌ಚಿ ದಕ್ಷಿಣ ಸಿಕ್ಕಿಂನ ಪ್ರಮುಖ ಧಾರ್ಮಿಕ ಕೇಂದ್ರ. ಬೌದ್ಧರಿಗೂ ಹಿಂದುಗಳಿಗೂ ಇದು ಅತ್ಯಂತ ಪವಿತ್ರ ಸ್ಥಳ. ಇಲ್ಲಿ ಒಂದೇ ಸ್ಥಳದಲ್ಲಿ ಹಿಂದೂ ದೇವಾಲಯಗಳ ಸಮುಚ್ಛಯ ಕಾಣಸಿಗುತ್ತದೆ. ಸಿಕ್ಕಿಂ ಸರಕಾರ ಸಮುಚ್ಛಯವನ್ನು ಕಲಾತ್ಮಕವಾಗಿ ನಿರ್ಮಿಸಿ ಕೊಟ್ಟಿದೆ. ಹನ್ನೆರಡು ಜ್ಯೋರ್ತಿಲಿಂಗಗಳು, ಚಾರಧಾಮ್ ದೇವಸ್ಥಾನ, ಶಿವನ 87 ಅಡಿ ಎತ್ತರದ ವಿಗ್ರಹ, ಒಂದು ಬದಿಗೆ ಸಣ್ಣ ಕೆರೆ– ಹೀಗೆ ಎಲ್ಲವನ್ನೂ ಒಂದೇ ಜಾಗದಲ್ಲಿ ನೋಡುವ ಒಂದು ಅಪೂರ್ವ ಅವಕಾಶ.

ಈ ದೇವಸ್ಥಾನಗಳು ಎತ್ತರದ ಒಂದು ಗುಡ್ಡದ ಮೇಲಿದೆ. ಸುತ್ತಲೂ ಪ್ರಕೃತಿಯ ಸೌಂದರ್ಯ ಸವಿಯಬಹುದು. ಗುಡ್ಡದಿಂದ ಇಳಿಯುವ ಮಾರ್ಗದಲ್ಲಿ ಸಾಯಿಬಾಬಾ ಮಂದಿರ ಎದುರುಗೊಳ್ಳುತ್ತದೆ. 5–6 ಕಿ.ಮೀ ದೂರದಲ್ಲಿ ತುಂಬ ಎತ್ತರದ ಪ್ರದೇಶದಲ್ಲಿರುವ ಸಮ್‌ದ್ರುಪ್ತಸೆ ಅನ್ನುವ ಸ್ಥಳವಿದೆ. ಇಲ್ಲಿ ಬೌದ್ಧ ಗುರು ಪದ್ಮ ಸಂಭವರ 45 ಮೀಟರ್ ಎತ್ತರದ ಮೂರ್ತಿ ಇದೆ. ಇದನ್ನು ಎರಡು ಅಂತಸ್ತಿನ ಕಟ್ಟಡದ ಮೇಲೆ ಪ್ರತಿಷ್ಠಾಪಿಸಿದ್ದಾರೆ. ಇದಕ್ಕೆ ಪ್ರವೇಶವಿರುವ ಹಿಂದುಗಡೆಯಿಂದ ಒಂದು ಅಂತಸ್ತಿನಲ್ಲಿ ಸುಂದರ ಮಾನೆಸ್ಟ್ರಿ ಇದೆ. ಅದರ ಮೇಲಿನ ಅಂತಸ್ತು ಖಾಲಿ ಇದ್ದು ಅದನ್ನು ದಾಟಿ ಮೇಲೆ ಹೋದರೆ ಮೂರ್ತಿಯ ಬುಡಕ್ಕೆ ತಲುಪುತ್ತೇವೆ. ಕಮಲದ ಮೇಲೆ ಕುಳಿತಿರುವ ವಿಗ್ರಹ ಆಕರ್ಷಕವಾಗಿದೆ. ಮುಖಕ್ಕೆ ಚಿನ್ನದ ಬಣ್ಣವನ್ನು ಲೇಪಿಸಿದ್ದಾರೆ. ಸುತ್ತಲೂ ಹಸಿರು ಪರ್ವತಗಳು, ಅದರ ಮಧ್ಯೆ ಈ ವಿಗ್ರಹ!

ಇಲ್ಲಿಂದ ಮುಂದೆ ಒಂದೂವರೆ ಗಂಟೆಗಳ ಪ್ರಯಾಣದ ನಂತರ ಸಿಕ್ಕುವ ಊರು ತೇಮಿ. ಸಿಕ್ಕಿಂ ರಾಜ್ಯದ ಪ್ರಖ್ಯಾತ ಚಹಾ ತೋಟವಿದು. ಇಲ್ಲಿಯ ಚಹಾ ಉತ್ಕೃಷ್ಟ ಮಟ್ಟದ್ದು. ನಾಮ್ಚಿಯಿಂದ ಗ್ಯಾಂಗ್ಟಕ್‌ಗೆ ಹೋಗುವಾಗ ದಾರಿಯ ಮಧ್ಯೆ ಈ ತೋಟವಿರುವುದರಿಂದ ಎಲ್ಲರೂ ಇಲ್ಲಿ ವಿಶ್ರಾಂತಿ ತೆಗೆದುಕೊಂಡು ಟೀ ಸವಿದು ಪ್ರಯಾಣ ಮುಂದುವರಿಸುತ್ತಾರೆ.

ಈ ದಾರಿಯಲ್ಲಿ ಪ್ರಯಾಣ ರೋಚಕ. ಚಹಾ ತೋಟದ ಮಧ್ಯೆಯೇ ಹಲವು ಹೇರ್‌ಪಿನ್ ತಿರುವುಗಳ ರಸ್ತೆ ಇದೆ. ಎರಡು ಗಂಟೆಯ ಪ್ರಯಾಣದ ನಂತರ ಸಿಂಗ್‌ಟಮ್ ಎಂಬ ಊರು ತಲುಪುತ್ತೇವೆ. ತೀಸ್ತಾ ನದಿಗೆ ಹೊಂದಿಕೊಂಡು ನದಿಯನ್ನು ಒತ್ತುವರಿ ಮಾಡಿಕೊಂಡು ಹಲವು ಬಹುಮಹಡಿ ಕಟ್ಟಡಗಳನ್ನು ಇಲ್ಲಿ ಕಟ್ಟಿದ್ದಾರೆ. ಈ ಕಟ್ಟಡಗಳು ಈಗ ಬೀಳುತ್ತದೋ, ಮತ್ತೆ ಬೀಳುತ್ತದೋ ಎನ್ನುವ ಸ್ಥಿತಿಯಲ್ಲಿವೆ!

ಮರುದಿನ ಗ್ಯಾಂಗ್ಟಕ್‌ನಿಂದ ನಮ್ಮ ಪ್ರಯಾಣ ಡಾರ್ಜಿಲಿಂಗ್ ಕಡೆಗೆ. ಡಾರ್ಜಿಲಿಂಗ್‌ಗೆ ಇಲ್ಲಿಂದ ನಾಲ್ಕು ಗಂಟೆಯ ದಾರಿ. ಸಿಕ್ಕಿಂ ರಾಜ್ಯದ ಬಗ್ಗೆ ಇಲ್ಲಿ ಒಂದು ಮಾತು ಹೇಳಲೇಬೇಕು. ಸಿಕ್ಕಿಂ, ಸ್ವಚ್ಛ, ನಿರ್ಮಲ, ಅಚ್ಚುಕಟ್ಟಾದ, ಪ್ಲಾಸ್ಟಿಕ್‌ರಹಿತ ತ್ಯಾಜ್ಯಮುಕ್ತ ರಾಜ್ಯ. ಇಲ್ಲಿಯ ರಸ್ತೆಗಳನ್ನು ಬಿ.ಆರ್.ಒ ಸಂಸ್ಥೆಯೇ ನಿರ್ವಹಿಸುತ್ತದೆ. ರಕ್ಷಣಾ ಸಚಿವಾಲಯದ ಮಾರ್ಗದರ್ಶನದಲ್ಲಿ